ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 357/2015

ಸಿ ಡಬ್ಲ್ಯೂ-4

ಪಿ ಡಬ್ಲ್ಯೂ-6

ದಿಃ 10-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಸಂತೋಷ ಮಾಳಸೇಖರ |
| ತಂದೆಯ ಹೆಸರುಃ | ದಾಮೋದರ |
| ವಯಸ್ಸುಃ | 62 ವರ್ಷ |
| ಉದ್ಯೋಗಃ | ನಿವೃತ್ತ ನೌಕರ |
| ವಿಳಾಸಃ | ನಂದನಗದ್ದ, ಕಾರವಾರ |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನಾನು ಮತ್ತು ಚಾಸಾ-1 ರವರು ಸೇರಿಕೊಂಡು ಸಮಾಜ ಕೆಲಸವನ್ನು ಮಾಡುತ್ತೇವೆ. ಚಾಸಾ-5 ಮತ್ತು 6 ರವರ ಪರಿಚಯವಿರುವುದಿಲ್ಲ. ದಿಃ09-04-2014 ರಂದು ನಾನು ಮತ್ತು ಚಾಸಾ-1 ರವರು ನ್ಯಾಯಾಲಯಕ್ಕೆ ಬಂದಿರುತ್ತೇವೆ. ಚಾಸಾ-1 ರವರು ನ್ಯಾಯಾಲಯದಲ್ಲಿ ಕೆಲಸ ಇದ್ದಿದ್ದರಿಂದ ಬಂದಿದ್ದರು. ಹೊರಗಡೆ ಬೈಯುತ್ತಿದ್ದರು, ಆದರೆ ನಂತರ ಆರೋಪಿ ಎಂದು ಗೊತ್ತಾಗಿರುತ್ತದೆ. ಆರೋಪಿ ಮಧ್ಯ ಚಾಸಾ-1 ರವರ ಮಧ್ಯ ಹಿಂದೆ ಯಾವುದಾದರೂ ಡ್ರಗ್ಸ ಪ್ರಕರಣ ವಿಷಯವಾಗಿ ಚಾಸಾ-1 ರವರ ವಿರುದ್ಧ ಸಾಕ್ಷಿಹೇಳಲು ಬಂದಿದ್ದರಿಂದ ಅವರಿಗೆ ಬೈಯುತ್ತಿದ್ದರು. ನಂತರ ಚಾಸಾ-1 ರವರು ಠಾಣೆಯಲ್ಲಿ ಆರೋಪಿ ವಿರುದ್ಧ ಪ್ರಕರಣ

ದಾಖಲಿಸಿರುತ್ತಾರೆ. ಅವಾಚ್ಯ ಶಬ್ದಗಳಿಂದ ಆರೋಪಿ ಬೈದಿರುತ್ತಾನೆ ಎಂದು ಪ್ರಕರಣ ಮಾಡಿದ್ದರು. ಗಲಾಟೆಯಾದಾಗ ಮಧ್ಯಾಹ್ನ 1.55 ಗಂಟೆಯಾಗಿತ್ತು. ಆ ದಿನ ಯಾವ ವಿಚಾರಕ್ಕಾಗಿ ಗಲಾಟೆಯಾಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ವಿಷಯವಾಗಿ ನಾನು ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ. ನಾನು ಇಂದು ನೇರವಾಗಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

ಪಾಟಿ ಸವಾಲುಃ ಮಾನ್ಯ ಎ.ಪಿ.ಪಿ.ಯವರಿಂದ

ದಿಃ 09-04-2014 ರಂದು ನೀವು ನ್ಯಾಯಾಲಯಕ್ಕೆ ಬಂದಾಗ ಚಾಸಾ-1 ರವರು ಸಿಸಿ ನಂ.14/2012 ರಲ್ಲಿ ಹೆರಾಯಿನ್ ಅಕ್ರಮ ಪ್ರಕರಣದಲ್ಲಿ ಆರೋಪಿಯ ಹೆಂಡತಿಯಾದ ಶೀಲಾ ನಾಯ್ಕ ಮತ್ತು ಸಂತೋಷ ನಾಯ್ಕ ಇವರ ವಿರುದ್ಧ ಸಾಕ್ಷಿ ವಿಚಾರಣೆಗಾಗಿ ಬಂದಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರೆದು ಅದೇ ವಿಚಾರಕ್ಕೆ ಇರಬಹುದು, ಆದರೆ ನನಗೆ ಸರಿಯಾಗಿ ವಿಷಯ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅವರ ಜೊತೆಗೆ ನೀವು, ಚಾಸಾ-5 ಮತ್ತು ಚಾಸಾ-6 ರವರು ಸಹ ಬಂದಿದ್ದೀರಿ ಎಂದರೆ ಸರಿಯಲ್ಲ. ನಾನು ಒಬ್ಬನೇ ಬಂದಿದ್ದೆ ಎಂದು ನುಡಿಯುತ್ತಾರೆ. ಆಗ ಈ ಪ್ರಕರಣದ ಆರೋಪಿಯ ಹೆಂಡತಿಯ ವಿರುದ್ಧ ಸಾಕ್ಷಿ

ಹೇಳಿದರೆ ನಿಮ್ಮನ್ನು ಜೀವಸಹಿತ ಬಿಡುವುದಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈದು, ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಅದೇ ದಿನ ಚಾಸಾ-1 ರವರು ಮಾನ್ಯ ನ್ಯಾಯಾಲಯದ ಮುಂದೆಯೇ ದೂರನ್ನು ನೀಡಿರುತ್ತಾರೆ ಎಂದರೆ ಗೊತ್ತಿರವುದಿಲ್ಲ. ಈ ಎಲ್ಲ ಘಟನೆಗಳಿಗೂ ನೀವು ಪ್ರತ್ಯಕ್ಷ ಸಾಕ್ಷಿದಾರರು ಆಗಿದ್ದೀರಿ ಎಂದರೆ ಸರಿಯಲ್ಲ. ಈ ಘಟನೆಗೆ ಸಂಬಂಧಪಟ್ಟಂತೆ ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು. ನಿಮಗೆ ಪ್ರಕರಣಕ್ಕೆ ಸಂಬಂಧಪಟ್ಟು ನಿಮಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ, ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಮಾನ್ಯ ಅಭಿಯೋಜಕರು ತಕರಾರು ಮಾಡಿದ್ದರಿಂದ ಪಾಟೀ ಸವಾಲನ್ನು ರೂ.200/- ಖರ್ಚಿನೊಂದಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.